ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ರವಿ ಮಳಮಣ್

ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಹೆಚ್.ಪಿ. ಸಂದೇಶ್

ಶ್ರೀಮತಿ ಮೈಮುನಾ -ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು

ರಿಟ್ ಅರ್ಜಿಸಂಖ್ಯೆ: 61/2019 (ಹೆಚ್ಸಿ), ದಿನಾಂಕ 18 ನೇ ಜುಲೈ, 2019

ಆಜ್ಞೆ

ನ್ಯಾಯಮೂರ್ತಿ ಶ್ರೀ ರವಿ ಮಳಮಠ:

ಇದರಲ್ಲಿನ ಅರ್ಜಿದಾರರು, ಬಂಧಿತ ಶ್ರೀ ಅಕ್ಬರ್ ಸಿದ್ದಿಕ್ ಅವರ ಪತ್ನಿ. ಅರ್ಜಿದಾರರು ಬಂಧಿತನ ಜೀವನ, ಕ್ಷೇಮಾಭಿವೃದ್ಧಿ ಮತ್ತು ವೈಯಕ್ತಿಕ ಸ್ವಾತಂತ್ರ್ಯದಲ್ಲಿ ಹಿತಾಸಕ್ತಿಯುಳ್ಳವರಾಗಿದ್ದಾರೆ.ಬಂಧಿತನ ಬಂಧನವನ್ನು ನಿರ್ದೇಶಿಸಿ, ಶ್ರೀ ರಜನೀಶ್ ಗೋಯೆಲ್, 9 ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ವಿಧಾನಸೌಧ, ಬೆಂಗಳೂರು ಇವರು ಅನುಬಂಧ- ಎ ಯಲ್ಲಿರುವಂತೆದಿನಾಂಕ: 03.04.2019 ರಂದು ಬಂಧನದ ಆದೇಶವನ್ನು ಹೊರಡಿಸಿದ್ದಾರೆ.ಶ್ರೀ ರಜನೀಶ್ ಗೋಯೆಲ್ ಅವರು ವಿದೇಶಿ ವಿನಿಮಯ ಸಂರಕ್ಷಣೆ ಮತ್ತು ಕಳ್ಳಸಾಗಾಣಿಕೆ ಕಾರಚಟುವಟಿಕೆಗಳ ತಡೆ ಅಧಿನಿಯಮ, 1974 ರ (ಸಂಕ್ಷಿಪ್ತವಾಗಿ ' ಸಿಒಎಫ್ಇಪಿಒಎಸ್ ಅಧಿನಿಯಮ) 3 ( 1) ನೇ ಪ್ರಕರಣದ ಅಡಿಯಲ್ಲಿ ವಿಶೇಷವಾಗಿ ಅಧಿಕೃತರಾಗಿರುವರೆಂದು ಮತ್ತು ' ಚಿನ್ನವನ್ನು ಕಳ್ಳಸಾಗಾಣೆ ಮಾಡುವ ಕೃತ್ಯದಿಂದ ಬಂಧಿತ ಶ್ರೀ ಅಕ್ಬರ್ ಸಿದ್ದಿಕ್ರನ್ನು ತಡೆಯುವ ದೃಷ್ಟಿಯಿಂದ ಎಂಬ ವಿಷಯವನ್ನು ಮನವರಿಕೆ ಮಾಡಿಕೊಂಡು, ಬಂಧಿತ ಶ್ರೀ ಅಕ್ಬರ್ ಸಿದ್ದಿಕ್ನ ಬಂಧನವನ್ನು ನಿರ್ದೇಶಿಸಿ, ಸಿಒಎಫ್ಇಪಿಒಎಸ್ ಅಧಿನಿಯಮದ 3 ( 1) ( i),(ii) ಮತ್ತು(iv) ನೇ ಪ್ರಕರಣಗಳ ನಿಬಂಧನೆಗಳಿಗೆ ಅನುಗುಣವಾಗಿ ಬಂಧನದ ಆದೇಶವನ್ನು ಹೊರಡಿಸಿದ್ದಾರೆಂದು ಬಂಧನದ ಆದೇಶದಲ್ಲಿರುವುದನ್ನು ಗಮನಿಸಲಾಗಿದೆ.ಅವಲಂಬಿಸಲಾದ ದಸ್ತಾವೇಜುಗಳ ಏಳು ಪೆಟ್ಟಿಗೆಗಳ ಕಡತಗಳೊಂದಿಗೆ, ಬಂಧಿತನಿಗೆ ಬಂಧನದ ಕಾರಣಗಳನ್ನು ಸಹ ಒದಗಿಸಲಾಗಿತ್ತು.

2. ಬಂಧಿತನಿಗೆ ಒದಗಿಸಿದ ಬಂಧನಕ್ಕಾಗಿನ ಕಾರಣಗಳ 69 ನೇ ಕಂಡಿಕೆಯ ಪರಿಣಾಮವಾಗಿ, ಬಂಧಿಸುವ ಪ್ರಾಧಿಕಾರಿ, ಕರ್ನಾಟಕ ಸರ್ಕಾರ, ಕೇಂದ್ರ ಸರ್ಕಾರ ಮತ್ತು ಸಿಒಎಫ್ಇಪಿಒಎಸ್ಎ ಸಲಹಾ ಮಂಡಳಿಗೆ ಬಂಧನದ ವಿರುದ್ಧ ಮನವಿಗಳನ್ನು ಸಲ್ಲಿಸುವ ಹಕ್ಕನ್ನು ನೀಡಲಾಗಿತ್ತು ಎಂಬುದು ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳ ಮುಖ್ಯ ವಾದವಾಗಿದೆ.

3. ತದನುಸಾರವಾಗಿ,ದಿನಾಂಕ: 24.04.2019 ರಂದು ಮುಖ್ಯ ಅಧೀಕ್ಷಕರು, ಕೇಂದ್ರ ಬಂದೀಖಾನೆ, ಬೆಂಗಳೂರು ಇವರ ಮೂಲಕ ಬಂಧಿಸುವ ಪ್ರಾಧಿಕಾರಿಗೆ ಮನವಿಯನ್ನು ಸಲ್ಲಿಸಲಾಗಿತ್ತು.ಅದನ್ನು ಮುಖ್ಯ ಅಧೀಕ್ಷಕರು, ಕೇಂದ್ರ ಬಂದೀಖಾನೆ, ಬೆಂಗಳೂರು ಇವರುದಿನಾಂಕ: 30.04.2019 ರಂದು ಕರ್ನಾಟಕ ಸರ್ಕಾರಕ್ಕೆ ಕಳುಹಿಸಿದ್ದರು.ದಿನಾಂಕ: 03.05.2019 ರಂದು, ಅದನ್ನು ಸರ್ಕಾರವು ಪ್ರಾಯೋಜಕ ಏಜನ್ಸಿಗೆ ಕಳುಹಿಸಿತ್ತು.ದಿನಾಂಕ: 08.05.2019 ರಂದು, ಪ್ರಾಯೋಜಕ ಏಜನ್ಸಿಯು ಅಭಿಪ್ರಾಯಗಳನ್ನು ಮತ್ತು ವರದಿಗಳನ್ನು ಕಳುಹಿಸಿದೆ.ದಿನಾಂಕ: 24.05.2019 ರಂದು, ಮನವಿಯನ್ನು ಪರಿಗಣಿಸಿ ಹಿಂಬರಹ ನೀಡಲಾಗಿತ್ತು.ಈ ನಡುವೆ, ಮತ್ತೊಂದು ಮನವಿಯನ್ನು ಸಲ್ಲಿಸಲಾಗಿತ್ತು.ಅದಕ್ಕೆ 24.04.2019 ರ ದಿನಾಂಕವನ್ನು ನೀಡಲಾಗಿತ್ತಾದರೂ, ಅದನ್ನುದಿನಾಂಕ: 04.05.2019 ರಂದು ಮಾತ್ರವೇ ರಾಜ್ಯ ಸರ್ಕಾರಕ್ಕೆ ಕಳುಹಿಸಲಾಗಿತ್ತು.ದಿನಾಂಕ: 13.05.2019 ರಂದು ಅದನ್ನು ಪ್ರಾಯೋಜಕ ಏಜನ್ಸಿಗೆ ಕಳುಹಿಸಲಾಗಿತ್ತು.ದಿನಾಂಕ: 14.05.2019 ರಂದು ಪ್ರಾಯೋಜಕ ಏಜನ್ಸಿಯು ಅದನ್ನು ಮತ್ತು ಮನವಿಯ ಮೇಲಿನ ವರದಿಗಳನ್ನು ಕಳುಹಿಸಿದೆ.

4.ದಿನಾಂಕ: 24.05.2019 ರ ಹಿಂಬರಹದ ಮೂಲಕ, ಶ್ರೀ ರಜನೀಶ್ ಗೋಯೆಲ್, ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಒಳಾಡಳಿತ ಇಲಾಖೆ ಇವರು ಉತ್ತರವನ್ನು ನೀಡಿದ್ದಾರೆ.ಎರಡನೇ ಮನವಿಯನ್ನು ಪರಿಗಣಿಸಿಯೇ ಇಲ್ಲ. ಬಂಧಿತನು ಒಂದು ಉತ್ತರವನ್ನು ಮಾತ್ರ ಸ್ವೀಕರಿಸಿರುತ್ತಾನೆ.ಆದುದರಿಂದ, ಎರಡು ಮನವಿಗಳನ್ನು ಸಲ್ಲಿಸಿದಾಗ, ಸಂಬಂಧಪಟ್ಟ ಪ್ರಾಧಿಕಾರಿಗಳು ಎರಡನ್ನೂ ಪರಿಗಣಿಸಬೇಕಾದ ಅಗತ್ಯವಿದೆ; ಮೊದಲನೇ ಮನವಿಯನ್ನು ಪರಿಗಣಿಸುವಲ್ಲಿ ಒಂದು ತಿಂಗಳ ವಿಳಂಬವಾಗಿದ್ದು, ಅದು ದುರದೃಷ್ಟಕರವಾದುದಾಗಿದೆ; ಎರಡನೇ ಮನವಿಯನ್ನು ಪರಿಗಣಿಸದಿರುವುದು ಕಾನೂನುಬಾಹಿರವಾಗಿ ಬಂಧಿತನ ಹೆಚ್ಚಿನ ಬಂಧನವನ್ನು ಘೋಷಿಸಲು ಸಹ ಕಾರಣವಾಗಿದೆ ಎಂದು ಅವರು ವಾದಿಸಿದ್ದಾರೆ.

5. ಆಕ್ಷೇಪಣೆಗಳ ಹೇಳಿಕೆಯನ್ನವಲಂಬಿಸಿ, ಪ್ರತ್ಯರ್ಜಿದಾರ-ರಾಜ್ಯದ ಪರ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿ ಮತ್ತು ಹೆಚ್ಚುವರಿ ಅಡ್ವಕೇಟ್ ಜನರಲ್ ಶ್ರೀ ಸಂದೇಶ್ ಜೆ. ಚೌಟ ಅವರು ಇದನ್ನೇ ಪ್ರಶ್ನಿಸಿರುತ್ತಾರೆ.ಬಂಧಿತನ ಮನವಿಗಳನ್ನು ಪರಿಗಣಿಸುವಲ್ಲಿ ಯಾವುದೇ ವಿಳಂಬವಾಗಿರುವುದಿಲ್ಲವೆಂದು ಅವರು ವಾದಿಸಿದ್ದಾರೆ.ರಾಜ್ಯವು ಮನವಿಗಳನ್ನು ಪರಿಗಣಿಸಿದ್ದ ರೀತಿಗೆ ಸಂಬಂಧಿಸಿದಂತೆ ವಿವಿಧ ದಿನಾಂಕಗಳನ್ನು ಕುರಿತು ಅವರು ವಿವರಿಸಿದ್ದಾರೆ.ದಿನಾಂಕ: 24.04.2019 ರಂದು ಮೊದಲನೇ ಮನವಿಯನ್ನು ಪರಿಗಣಿಸುವ ಪ್ರಕ್ರಿಯೆ ನಡೆಯುತ್ತಿರುವಾಗಲೇ,ದಿನಾಂಕ: 04.05.2019 ರಂದು ಎರಡನೇ ಮನವಿಯನ್ನು ಸಲ್ಲಿಸಲಾಗಿತ್ತೆಂದು, ಅದರಿಂದಾಗಿ, ಎರಡನೇ ಮನವಿಯನ್ನು ಸಹ ಅಭಿಪ್ರಾಯಗಳನ್ನು ದಾಖಲಿಸಲು ಮತ್ತು ಕಂಡಿಕೆವಾರು ಷರಾಗಳನ್ನು ನೀಡಲು ಸಂಬಂಧಪಟ್ಟ ಪ್ರಾಧಿಕಾರಿಗಳಿಗೆ ಕಳಹಿಸಲಾಗಿತ್ತೆಂದು, ಅದನ್ನು ಸ್ವೀಕರಿಸಿದ ಕೂಡಲೇ, ತ್ವರಿತವಾಗಿ ಉತ್ತರವನ್ನು ಒದಗಿಸಲಾಗಿದೆಯಾದ್ದರಿಂದ, ಯಾವುದೇ ವಿಳಂಬವಾಗಿದೆ ಎಂದು ಹೇಳಲಾಗುವುದಿಲ್ಲವೆಂದು ವಾದಿಸಿದ್ದಾರೆ.

6. ಎರಡು ಮನವಿಗಳನ್ನು ಸಲ್ಲಿಸಲಾಗಿದ್ದು, ಒಂದು ಮನವಿಯನ್ನು ಮಾತ್ರ ಪರಿಗಣಿಸಲಾಗಿದೆ ಎಂಬ ಪ್ರಾಥಮಿಕ ವಾದಕ್ಕೆ ಸಂಬಂಧಪಟ್ಟಷ್ಟರಮಟ್ಟಿಗೆ, ಸಂಬಂಧಪಟ್ಟ ಪ್ರಾಧಿಕಾರಿಯು ಎರಡೂ ಮನವಿಗಳ ಪರಿಗಣನೆಯ ಆಧಾರದ ಮೇಲೆ ಹಿಂಬರಹವನ್ನು ನೀಡಿರುವರೆಂದು; ಶ್ರೀ ರಜನೀಶ್ ಗೋಯಲ್ ಅವರು ಬಂಧಿಸುವ ಪ್ರಾಧಿಕಾರಿ ಮಾತ್ರವಾಗಿರದೆ, ವಿಶೇಷವಾಗಿ ಪ್ರಾಧಿಕೃತರಾದ ರಾಜ್ಯದ ಪ್ರಾಧಿಕಾರಿಯು ಸಹ ಆಗಿರುವರೆಂದು; ಆದುದರಿಂದ, ಸಂಬಂಧಪಟ್ಟ ಪ್ರಾಧಿಕಾರಿಯಿಂದ ಕಂಡಿಕೆವಾರು ಷರಾಗಳನ್ನು ಮತ್ತು ಇತರ ಅಭಿಪ್ರಾಯಗಳನ್ನು ಸ್ವೀಕರಿಸಿ, ಎರಡನೇ ಉತ್ತರವನ್ನು ನೀಡುವ ಮೂಲಕ ಪ್ರಾಧಿಕಾರವು ಅದನ್ನು ಮರು-ಹಾಜರುಪಡಿಸುವುದು ನಿಷ್ಫಲ ಕಾರವಾಗಿದೆ ಎಂದು; ಸದರಿ ಪ್ರಾಧಿಕಾರಿಯವರು ಅದೇ ಪ್ರಾಧಿಕಾರಿಯಾಗಿರುವುದರಿಂದ ಮತ್ತು ಮನವಿಗಳನ್ನು ಅವರು ಪರಿಗಣಿಸಿರುವುದರಿಂದ ಅದು ಕಾನೂನಿನ ಅಗತ್ಯತೆಯನ್ನು ಈಡೇರಿಸಿದಂತಾಗುವುದು ಎಂದು ಮಾನ್ಯ ಹಿರಿಯ ನ್ಯಾಯವಾದಿಗಳು ನಿವೇದಿಸಿಕೊಂಡಿದ್ದಾರೆ.

7. ಮಾನ್ಯ ನ್ಯಾಯವಾದಿಗಳ ವಾದಗಳನ್ನು ಆಲಿಸಲಾಗಿದೆ.

8. ಬಂಧಿಸುವ ಪ್ರಾಧಿಕಾರಿಗೆ, ಕರ್ನಾಟಕ ಸರ್ಕಾರಕ್ಕೆ, ಕೇಂದ್ರ ಸರ್ಕಾರಕ್ಕೆ ಮತ್ತು ಸಿಒಎಫ್ಇಪಿಒಎಸ್ ಸಲಹಾ ಮಂಡಳಿಗೆ ಮನವಿಗಳನ್ನು ಸಲ್ಲಿಸಲು ಬಂಧಿತನಿಗೆ ನೀಡಲಾಗಿರುವ ಹಕ್ಕಿನ ಪರಿಣಾಮವಾಗಿ ಆತನು ಎರಡು ಮನವಿಗಳನ್ನು ಸಲ್ಲಿಸಿರುವನು ಎಂಬುದು ಅವಿವಾದಿತ.ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶ್ರೀ ರಜನೀಶ್ ಗೋಯೆಲ್ರವರು ಬಂಧಿಸುವ ಪ್ರಾಧಿಕಾರಿಯಾಗಿರುವರು.ಬಂಧಿಸುವ ಪ್ರಾಧಿಕಾರಿಗೆ ಸಲ್ಲಿಸಲಾಗಿದ್ದದಿನಾಂಕ: 24.04.2019 ರ ಮೊದಲ ಮನವಿಯನ್ನು ಮಾರನೇ ದಿನ ಎಂದರೆದಿನಾಂಕ: 25.04.2019 ರಂದು ಬಂದೀಖಾನೆ ಪ್ರಾಧಿಕಾರಿಯು ಕಳುಹಿಸಿದ್ದರು.ಎರಡನೇ ಮನವಿಯ ದಿನಾಂಕವು 24.04.2019 ಆಗಿದ್ದರೂ ಸಹ, ಅದನ್ನುದಿನಾಂಕ: 04.05.2019 ರಂದು ಸೆರೆಮನೆ ಅಧೀಕ್ಷಕರಿಗೆ ಸಲ್ಲಿಸಲಾಗಿತ್ತು ಮತ್ತು ಅದನ್ನು ತರುವಾಯದಲ್ಲಿ ವಿಲೇ ಮಾಡಲಾಗಿತ್ತು.ಆದುದರಿಂದ, ಮೊದಲನೇ ಮನವಿಯನ್ನು ಶ್ರೀ ರಜನೀಶ್ ಗೋಯೆಲ್ ಅವರಿಗೆ ಮತ್ತು ಎರಡನೇ ಮನವಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಗಿತ್ತು.

9. ವಿವಾದಗಳನ್ನು ಪರಿಶೀಲಿಸಿದ ನಂತರ, ಬಂಧಿತನು ಸಲ್ಲಿಸಿದ ಮನವಿಗಳಿಗೆ ಸಂಬಂಧಪಟ್ಟಷ್ಟರಮಟ್ಟಿಗೆ, ಅವುಗಳಲ್ಲಿ ಒಂದು ಮನವಿಗೆ ಮಾತ್ರ ಉತ್ತರಿಸಲಾಗಿದೆ ಎಂದು ನಿರ್ಣಯಿಸಲು ನಮಗೆ ಯಾವುದೇ ಸಂದಿಗ್ಧತೆ ಇಲ್ಲ. ಹೀಗೆ ಪರಿಗಣಿಸಲಾದ ಮನವಿಗಳನ್ನು ಬಂಧಿಸುವ ಪ್ರಾಧಿಕಾರಿಯು ಹಾಗೂ ರಾಜ್ಯ ಸರ್ಕಾರವು ಪರಿಗಣಿಸಿರುವರೆಂದು ರಾಜ್ಯವು ಹೇಳಿದ್ದರೂ ಸಹ, ನಮ್ಮಿಂದ ಅಂಥ ವಾದವನ್ನು ಒಪ್ಪಲು ಸಾಧ್ಯವಿಲ್ಲ.ಒಂದು ಉತ್ತರದಲ್ಲಿ ಎರಡು ಉತ್ತರಗಳಿರಲು ಸಾಧ್ಯವಿಲ್ಲ.ಅದು ಕಾನೂನಿನ ಉಲ್ಲಂಘನೆಯಾಗುತ್ತದೆ.ಬಂಧಿತನ

ಮನವಿಗಳನ್ನು ಪರಿಶೀಲಿಸುವುದು ಪ್ರತಿವಾದಿಗಳ ಸಾಂವಿಧಾನಿಕ ಕರ್ತವ್ಯವಾಗಿದೆ.ಮನವಿಗಳನ್ನು ಪರಿಶೀಲಿಸುವಲ್ಲಿ ಆದ ವಿಫಲತೆಯಿಂದಾಗಿ ಬಂಧಿತನಿಗೆ ನೀಡಲಾದ ಹಕ್ಕನ್ನು ನಿರಾಕರಿಸಿದಂತಾಗುತ್ತದೆ.ಬಂಧಿಸುವ ಪ್ರಾಧಿಕಾರಿಗೆ ಮನವಿ ಸಲ್ಲಿಸುವುದು ಮಾತ್ರ ಬಂಧಿತನ ಹಕ್ಕಾಗಿರದೆ, ರಾಜ್ಯ ಸರ್ಕಾರಕ್ಕೆ, ಕೇಂದ್ರ ಸರ್ಕಾರಕ್ಕೆ ಹಾಗೂ ಸಲಹಾ ಮಂಡಳಿಗೆ ಮನವಿ ಸಲ್ಲಿಸುವುದು ಸಹ ಬಂಧಿತನ ಹಕ್ಕಾಗಿರುತ್ತದೆ.ಒಂದು ಮನವಿಯನ್ನು ಬಂಧಿಸುವ ಪ್ರಾಧಿಕಾರಿಗೆ ಮತ್ತು ಇನ್ನೊಂದನ್ನು ರಾಜ್ಯ ಸರ್ಕಾರಕ್ಕೆ ಹೀಗೆ ಮನವಿಗಳನ್ನು ಸಲ್ಲಿಸಿದಾಗ, ಬಂಧಿಸುವ ಪ್ರಾಧಿಕಾರಿಯು ಅವಶ್ಯವಾಗಿ ಮನವಿಯನ್ನು ಪರಿಗಣಿಸಬೇಕಾಗುತ್ತದೆಯಷ್ಟೇ ಅಲ್ಲದೆ, ರಾಜ್ಯ ಸರ್ಕಾರವು ಸಹ ಅದನ್ನು ಎ ಪರಿಗಣಿಸಬೇಕಾಗುತ್ತದೆ.ಎರಡು ಮನವಿಗಳಿಗೆ ಒಂದೇ ಉತ್ತರ ಇರಲು ಸಾಧ್ಯವಿಲ್ಲ.ಬೇರೆ ರೀತಿಯಿಂದಲೂ ಸಹ, ಸದರಿ ವಾದವನ್ನು ಯಾವುದೇ ಇತರ ಸಾಕ್ಷ್ಯದಿಂದ ಸಮರ್ಥಿಸಲಾಗಿಲ್ಲ.ಒದಗಿಸಲಾದ ಉತ್ತರವು ಬಂಧಿಸುವ ಪ್ರಾಧಿಕಾರಿ ಹಾಗೂ ರಾಜ್ಯ ಸರ್ಕಾರದ ಪರವಾಗಿ ನೀಡಲಾದ ಉತ್ತರ ಎಂದು ಅದು ಸೂಚಿಸುವುದಿಲ್ಲ.ಆದ್ದರಿಂದ, ಇಂಥ ವಾದವನ್ನು ಒಪ್ಪಲಾಗುವುದಿಲ್ಲ.ಆದುದರಿಂದ, ಪ್ರತಿವಾದಿಗಳು ಒದಗಿಸಿದ ಒಂದೇ ಉತ್ತರವನ್ನು, ಬಂಧಿಸುವ ಪ್ರಾಧಿಕಾರಿ ಹಾಗೂ ರಾಜ್ಯ ಸರ್ಕಾರ ಈರ್ವರೂ ನೀಡಿದ ಉತ್ತರವೆಂದು ಕಾನೂನು ಪ್ರಕಾರ ಹೇಳಲಾಗುವುದಿಲ್ಲ.ಇಂಥ ವಾದವನ್ನು ಸಮರ್ಥಿಸಲು ಕಾನೂನಿನ ಯಾವುದೇ ಉದ್ಘೋಷಣೆ ಇರುವುದಿಲ್ಲ.ಈ ಮೊಕದ್ದಮೆಯ ಸಂಗತಿಗಳು ಮತ್ತು ಸಂದರ್ಭಗಳ ಹಿನ್ನೆಲೆಯಲ್ಲಿ, ಎರಡು ಮನವಿಗಳನ್ನು ಸಲ್ಲಿಸಲಾಗಿದ್ದು, ಒಂದು ಮನವಿಯನ್ನು ಮಾತ್ರ ಪರಿಗಣಿಸಿರುವುದರಿಂದ, ಇನ್ನೊಂದು ಮನವಿಯು ಅದೇ ದಿನಾಂಕದ್ದಾಗಿದ್ದರೂ ಸಹ ಉತ್ತರಿಸದೆ ಹಾಗೇ ಉಳಿದಿದೆ ಎಂದು ನಿರ್ಣಯಿಸುವುದು ಸಮರ್ಪಕವಾಗಿದೆ.ಆದುದರಿಂದ, ಬಂಧಿತನ ಹೆಚ್ಚಿನ ಬಂಧನವು ಕಾನೂನು ಪ್ರಕಾರವಾಗಿ ದೋಷಯುಕ್ತವಾಗುತ್ತದೆ.

10. ಮನವಿಯನ್ನು ಪರಿಗಣಿ ಸುವುದನ್ನು ಕುರಿತ ಕಾನೂನು ಇತ್ಯರ್ಥವಾದುದಾಗಿದ್ದು, ಅದನ್ನು ಪುನರುಚ್ಚರಿಸುವ ಅವಶ್ಯಕತೆ ಇರುವುದಿಲ್ಲ.ಮನವಿಯನ್ನು ಸಲ್ಲಿಸಿದಾಗಲೆಲ್ಲಾ, ಅದನ್ನು ಕಾವ್ಯಸಾಧ್ಯವಿದ್ದಷ್ಟು ಬೇಗನೆ ಪರಿಗಣಿಸಬೇಕು.ಕಾವ್ಯಸಾಧ್ಯವಿದ್ದಷ್ಟು ಬೇಗನೆ ಮನವಿಯನ್ನು ಪರಿಗಣಿಸದಿದ್ದರೆ ಮತ್ತು ಆ ವಿಳಂಬಕ್ಕೆ ಒಪ್ಪಿಕೊಳ್ಳಬಹುದಾದ ಯಾವುದೇ ಕಾರಣವಿರದಿದ್ದರೆ, ಬಂಧಿತನ ಹೆಚ್ಚಿನ ಬಂಧನವು ಕಾರಣ ಮಾತ್ರದಿಂದಲೇ ಕಾನೂನು ಬಾಹಿರವಾಗುವುದು.ಆದಾಗ್ಯೂ, ಪ್ರಸ್ತುತ ಮೊಕದ್ದಮೆಯಲ್ಲಿ, ಎರಡನೇ ಮನವಿಯನ್ನು ಪ್ರಾಧಿಕಾರಿಗಳು ಪರಿಗಣಿಸಿಯೇ ಇಲ್ಲ. ಆದುದರಿಂದ, ಇದು ವಿಷಯವನ್ನು ಪರಿಗಣಿಸದಿರುವ ಮೊಕದ್ದಮೆಯಾಗಿದೆ.ಮನವಿಯನ್ನು ಪರಿಗಣಿಸದೇ ಇರುವಾಗ, ಬಂಧಿತನ ಹೆಚ್ಚಿನ ಬಂಧನವನ್ನು ಕಾನೂನುಬಾಹಿರವನ್ನಾಗಿ ಆತನ ಹಕ್ಕಿನ ಉಲ್ಲಂಘನೆಯಾಗುತ್ತದೆ.

11. ನಮ್ಮ ಈ ಅಭಿಪ್ರಾಯಗಳು ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳಿಂದ ಪಡೆದವುಗಳಾಗಿವೆ.ಅವು ಈ ಮುಂದಿನಂತಿವೆ:

(1) ರಾಮಾ ಧೋಂಡು ಬೊರಡೆ ವಿರುದ್ಧ ವಿ.ಕೆ. ಸರಾಫ್, ಪೊಲೀಸ್ ಆಯುಕ್ತರು ಮತ್ತು ಇತರರು -  ಎಐಆರ್ 1989 ಎಸ್ಸಿಸಿ 1861, ಮೊಕದ್ದಮೆಯಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಚ 20 ನೇ ಕಂಡಿಕೆಯಲ್ಲಿ ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

"20. ಬಂಧಿತನು, ಸಂವಿಧಾನದ 22 ( 5) ನೇ ಅನುಚ್ಛೇದದ ಅಡಿಯಲ್ಲಿ ತನ್ನ ಮನವಿಯನ್ನು ಸಲ್ಲಿಸುವ ಸ್ವತಂತ್ರ ಸಾಂವಿಧಾನಿಕ ಹಕ್ಕನ್ನು ಹೊಂದಿರುತ್ತಾನೆ.ಇದಕ್ಕೆ ಸಂವಾದಿಯಾಗಿ, ಬಂಧಿತನ ಮೇಲೆ ಜಾರಿಗೊಳಿಸಿದ ಬಂಧನದ ಆದೇಶದ ಸರಿತನವನ್ನು ಪ್ರಶ್ನಿಸಿ ತನ್ನ ಮನವಿಯನ್ನು ಬಂಧಿತನು ಯಾವ ಪ್ರಾಧಿಕಾರಿಗೆ ಕಳುಹಿಸುವನೋ ಆ ಸಂಬಂಧಪಟ್ಟ ಪ್ರಾಧಿಕಾರಿಯನ್ನು ನಿರ್ದೇಶಿಸುವ ಮತ್ತು ಆತನ ಬಿಡುಗಡೆಯನ್ನು ಕೋರುವ ಸದರಿ ಮನವಿಯನ್ನು ಸೂಕ್ತ ಅವಧಿಯೊಳಗೆ ಪರಿಗಣಿಸುವ ಹಾಗೂ ಕಾವ್ಯಸಾಧ್ಯವಿದ್ದಷ್ಟೂ ತ್ವರಿತವಾಗಿ ಅದನ್ನು ವಿಲೆ ಮಾಡುವ ಸಾಂವಿಧಾನಿಕ ಆಜ್ಞಾಪನೆ ಇದೆ. ಈ ಸಾಂವಿಧಾನಿಕ ಅಗತ್ಯತೆಯನ್ನು ಆದರಪೂರ್ವಕವಾಗಿ ಈಡೇರಿಸಬೇಕು ಎಂದಿದ್ದು, ಈ ಸಾಂವಿಧಾನಿಕ ಆಜ್ಞಾಪನೆಯ ಪಾಲನೆಯನ್ನು ಉಲ್ಲಂಘಿಸಿದರೆ, ಅಂಥ ಉಲ್ಲಂಘನೆಯು ಸಂವಿಧಾನದ 21 ನೇ ಅನುಚ್ಛೇದದಲ್ಲಿ ಅಳವಡಿಸಲಾಗಿರುವ ಅತ್ಯಂತ ಹೆಚ್ಚು ಮನ್ನಣೆ ನೀಡಿದ ಸ್ವಾತಂತ್ರ್ಯದ ಮೂಲ ಪರಿಕಲ್ಪನೆಯನ್ನೇ ವಿಫಲಗೊಳಿಸುತ್ತದೆಯಾದ್ದರಿಂದ, ಸಾಂವಿಧಾನಿಕವಾಗಿ ಅನುಮತೀಯವಲ್ಲದ ಮತ್ತು ಕಾನೂನುಬಾಹಿರವಾಗಿರುವ ಈ ಬಂಧನದ ಮುಂದುವರಿಕೆಯು ಸಾಂವಿಧಾನಿಕ ಬಾಧ್ಯತೆಯ ನಿರಾಕರಣೆ ಎನಿಸುವುದು. "

(ii) ರತನ್ ಸಿಂಗ್ -ವಿರುದ್ಧ-ಪಂಜಾಬ್ ರಾಜ್ಯ ಮತ್ತು ಇತರರು - 1981 ಎಸ್.ಸಿ.ಸಿ. (ಕ್ರಿ) 853, ಮೊಕದ್ದಮೆಯಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು 4 ನೇ ಕಂಡಿಕೆಯಲ್ಲಿ ಈ ಚ ಮುಂದಿನಂತೆ ಅಭಿಪ್ರಾಯಪಟ್ಟಿದೆ:

"4. ಪಂಜಾಬ್ ಸರ್ಕಾರದ ಮನವಿಗೆ ಸಂಬಂಧಪಟ್ಟಿರುವಷ್ಟರ ಮಟ್ಟಿಗೆ ಯಾವುದೇ ತೊಂದರೆ ಇರುವುದಿಲ್ಲ.ಆದರೆ, ದುರದೃಷ್ಟವಶಾತ್ ಪ್ರಾಧಿಕಾರಿಗಳ ಕಡೆಯಿಂದ ಆದ ಲೋಪವೆಂದರೆ, ಕೇಂದ್ರ ಸರ್ಕಾರಕ್ಕೆ ಬಂಧಿಯು ಸಲ್ಲಿಸಿದ ಮನವಿಯನ್ನು ಅವರು ಸಂಪೂರ್ಣವಾಗಿ ನಿರ್ಲಕ್ಷಿಸಿದರು.ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳೆರಡಕ್ಕೂ ಬಂಧಿತನು ಏಕ ಕಾಲದಲ್ಲಿ ಬಂದೀಖಾನೆ ಅಧೀಕ್ಷಕರ ಮುಖಾಂತರ ಮನವಿಗಳನ್ನು ಸಲ್ಲಿಸಿದ್ದಾನೆ.ಅಧೀಕ್ಷಕರು ಸಂಬಂಧಪಟ್ಟ ಸರ್ಕಾರಗಳಿಗೆ ಪ್ರತ್ಯೇಕವಾಗಿ ಮನವಿಗಳನ್ನು ಕಳುಹಿಸಬೇಕಿತ್ತು ಅಥವಾ ಇನ್ನೊಂದು ಮನವಿಯನ್ನು ಕೇಂದ್ರ ಸರ್ಕಾರಕ್ಕೆ ರವಾನಿಸಲು ಕೋರುವುದರೊಂದಿಗೆ ರಾಜ್ಯ ಸರ್ಕಾರಕ್ಕೆ ಅವುಗಳನ್ನು ಕಳುಹಿಸಬೇಕಿತ್ತು.ಯಾರೋ ಒಬ್ಬರೋ ಎಲ್ಲೋ ಒಂದು ಕಡೆ ಎಡವಿದ್ದಾರೆ ಮತ್ತು ಸ್ಪಷ್ಟವಾಗಿಯೇ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ ಮನವಿಯನ್ನು ಅದಕ್ಕೆ ಎಂದಿಗೂ ಕಳುಹಿಸಿಲ್ಲ, ಈ ಬೇಜವಾಬ್ದಾರಿತನದಿಂದಾಗಿ ಬಂಧಿತನು ಪ್ರತಿವಾದಿಸುವ ತನ್ನ ಅಮೂಲ್ಯ ಹಕ್ಕಿನಿಂದ ಮತ್ತು ಆತನ ವೈಯಕ್ತಿಕ ಸ್ವಾತಂತ್ರ್ಯದ ಮೂಲಭೂತ ಹಕ್ಕನ್ನು ಸಾಧಿಸುವುದರಿಂದ ವಂಚಿತನಾಗಿದ್ದಾನೆ ಎಂಬುದು ಅಪರಿಹಾರ್ಯವಾದ ಪರಿಣಾಮವಾಗಿದೆ.ಬಂಧಿತನು ಒಬ್ಬ ಕಳ್ಳಸಾಗಾಣಿಕೆದಾರನಾಗಿದ್ದು, ಆತನ ಗುಂಪಿನ (ಮತ್ತು ಅವರ ಸಂಖ್ಯೆ ಹೇಗೆ ಹೆಚ್ಚುತ್ತಿದೆ!) ಕಾರಚಟುವಟಿಕೆಗಳು ಭಾರತದ ಆರ್ಥಿಕತೆಯನ್ನು ದುರ್ಬಲಗೊಳಿಸಿರುವುದರಿಂದ ಅದಕ್ಕೆ ಯಾವುದೇ ಸಹಾನುಭೂತಿ ತೋರಿಸುವ ಅಗತ್ಯವಿಲ್ಲವೆಂಬುದು ಇದಕ್ಕೆ ಕಾರಣವಿರಬಹುದು.ಆದರೆ, ನಿರ್ಬಂಧಿತ ಬಂಧನ ಸಂಬಂಧಿ ಕಾನೂನುಗಳು, ಅವುಗಳ ಅಡಿಯಲ್ಲಿ ಬಂಧಿತ ವ್ಯಕ್ತಿಗಳಿಗೆ ಅಲ್ಪಸ್ವಲ್ಪ ಸುರಕ್ಷತೆಗಳನ್ನು ಮಾತ್ರವೇ ನೀಡುತ್ತವೆ ಮತ್ತು ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸ್ವಾತಂತ್ರ್ಯ ಮತ್ತು ಮುಕ್ತತೆಗಳು ಯಾವುದಾದರೂ ಅರ್ಥವನ್ನು ಹೊಂದಿದ್ದರೆ, ಕಡೇಪಕ್ಷ ಆ ಸುರಕ್ಷತೆಗಳನ್ನು ಬಂಧಿತರಿಗೆ ನಿರಾಕರಿಸಬಾರದೆಂಬುದು ಅತ್ಯಾವಶ್ಯಕವಾಗಿದೆ.ಸಿಓಎಫ್ಇಪಿಓಎಸ್ ಅಧಿನಿಯಮದ 11 ( 1) ನೇ ಪ್ರಕರಣವು, ಬಂಧನದ ಆದೇಶವನ್ನು ರಾಜ್ಯ ಸರ್ಕಾರ ಅಥವಾ ಅದರ ಅಧಿಕಾರಿ ಮಾಡಿದ್ದರೂ ಸಹ, ಅದನ್ನು ಹಿಂಪಡೆಯುವ ಅಧಿಕಾರವನ್ನು ಕೇಂದ್ರ ಸರ್ಕಾರಕ್ಕೆ ಪ್ರದಾನ ಮಾಡಿರುತ್ತದೆ.ಆ ಅಧಿಕಾರವನ್ನು ವಾಸ್ತವೀಕರಿಸುವ ಮತ್ತು ಪರಿಣಾಮಕಾರಿಯನ್ನಾಗಿಸುವ ಸಲುವಾಗಿ, ಬಂಧನದ ಆದೇಶದ ವಿರುದ್ಧ ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸುವ ಹಕ್ಕನ್ನು ಬಂಧಿತನಿಗೆ ನೀಡಬೇಕಾಗುತ್ತದೆ.ಈ ಮೊಕದ್ದಮೆಯಲ್ಲಿ, ಕೇಂದ್ರ ಸರ್ಕಾರಕ್ಕೆ ಬಂಧಿತನ ಮನವಿಯನ್ನು ಕಳುಹಿಸುವ ಸಂಬಂಧದಲ್ಲಿ ಬಂದೀಖಾನೆ ಅಧೀಕ್ಷಕರ ಕಡೆಯಿಂದಾಗಲಿ ಅಥವಾ ರಾಜ್ಯ ಸರ್ಕಾರದ ಕಡೆಯಿಂದಾಗಲಿ ಆದ ವಿಫಲತೆಯು, ಆ ಸರ್ಕಾರವು ಬಂಧಿತನ ಬಂಧನದ ಆದೇಶವನ್ನು ಹಿಂಪಡೆಯುವ ಆತನ ಅಮೂಲ್ಯ ಹಕ್ಕಿನಿಂದ ಆತನನ್ನು ವಂಚಿತಗೊಳಿಸಿದೆ.ಆದುದರಿಂದ, ಬಂಧಿತನ ಮುಂದುವರಿದ ಬಂಧನವನ್ನು ಕಾನೂನುಬಾಹಿರವೆಂದು ಅಭಿಪ್ರಾಯಪಟ್ಟು ಬಂಧಿತನನ್ನು ಬಿಡುಗಡೆ ಮಾಡಬೇಕೆಂದು ನಿರ್ಣಯಿಸಲಾಗಿದೆ. "

(iii) ಕಮಲೇಶ್ಕುಮಾರ್ ಈಶ್ವರ್ದಾಸ್ ಪಟೇಲ್ ವಿರುದ್ಧ ಭಾರತ ಒಕ್ಕೂಟ ಮತ್ತು ಇತರರು - 1995 ಎಸ್.ಸಿ.ಸಿ. (ಕ್ರಿ) 643, ಮೊಕದ್ದಮೆಯಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು 38 ನೇ ಕಂಡಿಕೆಯಲ್ಲಿ ಈ ಮುಂದಿನಂತೆ ನಿರ್ಣಯಿಸಿದೆ:

"38. ಸಂವಿಧಾನದ 22(5)ನೇ ಅನುಚ್ಛೇದದ ಉಪಬಂಧಗಳನ್ನು ಮತ್ತು ಸಿಓಎಫ್ಇಪಿಓಎಸ್ ಉಪಬಂಧಗಳನ್ನು ಹಾಗೂ ಪಿಐಟಿ ಎನ್ಡಿಪಿಎಸ್ ಅಧಿನಿಯಮವನ್ನು ಗಮನದಲ್ಲಿರಿಸಿಕೊಂಡು ಕೇಳಿದ ಪ್ರಶ್ನೆಗೆ ಹೀಗೆ ಉತ್ತರಿಸಲಾಗಿದೆ:ಕೇಂದ್ರ ಸರ್ಕಾರವಾಗಲಿ ಅಥವಾ ರಾಜ್ಯ ಸರ್ಕಾರವಾಗಲಿ ಈ ಉದ್ದೇಶಕ್ಕಾಗಿ ವಿಶೇಷವಾಗಿ ಅಧಿಕೃತಗೊಳಿಸಿದ ಅಧಿಕಾರಿಯು, ಸಿಓಎಫ್ಇಪಿಓಎಸ್ಎ ಅಧಿನಿಯಮದ 3 ನೇ ಪ್ರಕರಣದ ಮತ್ತು ಪಿಐಟಿ ಎನ್ಡಿಪಿಎಸ್ ಅಧಿನಿಯಮದ ಮೇರೆಗೆ ಹೊರಡಿಸಿದ ಬಂಧನದ ಆದೇಶವನ್ನು ಹೊರಡಿಸಿದ್ದಲ್ಲಿ, ಬಂಧಿತ ವ್ಯಕ್ತಿಯು ಸದರಿ ಆದೇಶಕ್ಕೆ ಮನವಿಯನ್ನು ಸಲ್ಲಿಸುವ ಹಕ್ಕನ್ನು ಹೊಂದಿರುತ್ತಾನೆ ಮತ್ತು ಸದರಿ ಅಧಿಕಾರಿಯು ಸದರಿ ಮನವಿಯನ್ನು ಪರಿಗಣಿಸಲು ಹೊಣೆಗಾರನಾಗಿರುತ್ತಾನೆ ಹಾಗೂ ಹಾಗೆ ಮಾಡುವಲ್ಲಿ ಆತನ ಕಡೆಯಿಂದಾಗುವ ವಿಫಲತೆಯು, ಬಂಧನದ ಆದೇಶದ ವಿರುದ್ಧ ಮನವಿಯನ್ನು ಸಲ್ಲಿಸಲು ಬಂಧಿತ ವ್ಯಕ್ತಿಗೆ ನೀಡಿದ ಹಕ್ಕಿನ ನಿರಾಕರಣೆಯಾಗಿ ಪರಿಣಮಿಸುತ್ತದೆ.ಬಂಧಿತನ ಈ ಹಕ್ಕು, ಬಂಧನದ ಆದೇಶವನ್ನು ರಾಜ್ಯ ಸರ್ಕಾರದಿಂದ ವಿಶೇಷವಾಗಿ ಪ್ರಾಧಿಕೃತನಾದ ಅಧಿಕಾರಿಯು ಹೊರಡಿಸಿದ್ದಲ್ಲಿ, ರಾಜ್ಯ ಸರ್ಕಾರಕ್ಕೆ ಮತ್ತು ಕೇಂದ್ರ ಸರ್ಕಾರಕ್ಕೆ ಹಾಗೂ ಕೇಂದ್ರ ಸರ್ಕಾರದಿಂದ ವಿಶೇಷವಾಗಿ ಪ್ರಾಧಿಕೃತನಾದ ಅಧಿಕಾರಿಯು ಬಂಧನದ

ಆದೇಶವನ್ನು ಹೊರಡಿಸಿದ್ದಲ್ಲಿ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸುವ ಆತನ ಹಕ್ಕಿನ ಜೊತೆಗೆ ಹೆಚ್ಚುವರಿ ಹಕ್ಕಾಗಿದೆ ಮತ್ತು ಅದನ್ನು ಯುಕ್ತವಾಗಿ ಪರಿಗಣಿಸಬೇಕಾಗುವುದು.ಮನವಿಯನ್ನು ಸಲ್ಲಿಸುವ ಈ ಹಕ್ಕು ಅವಶ್ಯವಾಗಿ, ಬಂಧನದ ಕಾರಣಗಳೊಂದಿಗೆ ಬಂಧನದ ಆದೇಶವನ್ನು ಜಾರಿ ಮಾಡುವ ಸಮಯದಲ್ಲಿ ಬಂಧನದ ಆದೇಶವನ್ನು ಹೊರಡಿಸುವ ಪ್ರಾಧಿಕಾರಿಗೆ ಮನವಿಯನ್ನು ಸಲ್ಲಿಸುವ ಬಂಧಿತ ವ್ಯಕ್ತಿಯ ಹಕ್ಕಿನ ಬಗ್ಗೆ, ಅಂಥ ಮನವಿಯನ್ನು ಆತನು ಸಲ್ಲಿಸಲು ಸಾಧ್ಯವಾಗುವಂತೆ ಆತನಿಗೆ ತಿಳಿಸಬೇಕು ಎಂಬ ಅಂಶವನ್ನು ಒಳಗೊಂಡಿದೆ ಹಾಗೂ ಹಾಗೆ ಮಾಡಲು ವಿಫಲವಾಗುವುದು ಮನವಿಯನ್ನು ಸಲ್ಲಿಸಲು ಇರುವ ಬಂಧಿತ ವ್ಯಕ್ತಿಯ ಹಕ್ಕಿನ ನಿರಾಕರಣೆಯಾಗುವುದು. "

(iv) ಅಮೀರ್ ಶಾದ್ ಖಾನ್ -ವಿರುದ್ಧ- ಎಲ್. ಸ್ಮಿಂಗ್ಲಿಯಾನಾ ಮತ್ತು ಇತರರು – 1991 ಎಸ್.ಸಿ.ಸಿ. (ಸಿ.ಆರ್.ಐ) 946, ಮೊಕದ್ದಮೆಯಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು 3 ನೇ ಕಂಡಿಕೆಯಲ್ಲಿ ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

"3. XXX

ಹೀಗೆ, ಸಾಮಾನ್ಯ ಖಂಡಗಳ ಅಧಿನಿಯಮದ 21 ನೇ ಪ್ರಕರಣ ಮತ್ತು ಅಧಿನಿಯಮದ 11 ನೇ ಪ್ರಕರಣಗಳನ್ನು ಒಟ್ಟಿಗೆ ಓದುವುದರಿಂದ, ಬಂಧನದ ಆದೇಶವನ್ನು ಹಿಂಪಡೆಯುವ ಅಧಿಕಾರವು ಮೂರು ಪ್ರಾಧಿಕಾರಗಳು, ಎಂದರೆ, ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಅಧಿಕಾರಿ, ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರ ಚಲಾಯಿಸಬಹುದೆಂಬುದು ಸ್ಪಷ್ಟವಾಗುತ್ತದೆ.ಸಮುಚಿತ ಸರ್ಕಾರಕ್ಕೆ 8 (ಎಫ್) ಪ್ರಕರಣದ ಮೂಲಕ ಪ್ರದಾನ ಮಾಡಿದ ಹಿಂಪಡೆಯುವ ಅಧಿಕಾರವು ಸ್ಪಷ್ಟವಾಗಿ ಈ ಸ್ವತಂತ್ರ ಅಧಿಕಾರವಾಗಿದೆ.ಆದ್ದರಿಂದ, ಅಧಿನಿಯಮದ 8 (ಎಫ್) ಪ್ರಕರಣವು 22 ( 4) ನೇ ಅನುಚ್ಛೇದದ ಅಗತ್ಯತೆಯನ್ನು ಈಡೇರಿಸಿದರೆ, ಅಧಿನಿಯಮದ 11 ನೇ ಪ್ರಕರಣವು ಸಂವಿಧಾನದ 22 ( 5) ನೇ ಅನುಚ್ಛೇದದ ತರುವಾಯದ ಭಾಗದ ಅಗತ್ಯತೆಯನ್ನು ಈಡೇರಿಸುತ್ತದೆ ಎಂಬುದು ಸ್ಪಷ್ಟ.ಆದುದರಿಂದ, ಶಾಸನಾತ್ಮಕ ಉಪಬಂಧಗಳನ್ನು 22 ನೇ ಅನುಚ್ಛೇದದ ಸುಸಂಗತ ಖಂಡಗಳ ಸಂದರ್ಭದಲ್ಲಿ ಓದಿದಾಗ, ಸಾಂವಿಧಾನಿಕ ಅಗತ್ಯತೆಗಳನ್ನು ಈಡೇರಿಸುವುದು ಮತ್ತು ಬಂಧಿತನ ಬಂಧನದ ಆದೇಶದ ವಿರುದ್ಧ ಮನವಿ ಸಲ್ಲಿಸಲು ಆತನಿಗೆ ನೀಡಲಾದ ಹಕ್ಕಿನ ಜಾರಿಗೆ ಉಪಬಂಧ ಕಲ್ಪಿಸುವುದು ಅವುಗಳ ಉದ್ದೇಶವಾಗಿದೆ ಎಂಬುದು ಸ್ಪಷ್ಟವಾಗುತ್ತದೆ.ಈ ದೃಷ್ಟಿಕೋನದಿಂದ ನೋಡಿದಾಗ, ಅಧಿನಿಯಮದ 11 ನೇ ಪ್ರಕರಣದ ಮೂಲಕ ಪ್ರದಾನ ಮಾಡಿದ ಅಧಿಕಾರವು, 22(5)ನೇ ಅನುಚ್ಛೇದವು ಗೊತ್ತುಪಡಿಸಿದ ಸಾಂವಿಧಾನಿಕ ಬಾಧ್ಯತೆಯೊಂದಿಗೆ ಯಾವ ರೀತಿಯಲ್ಲೂ ಸಂಬಂಧಪಟ್ಟಿರುವುದಿಲ್ಲವೆಂದು ಹೇಳಲಾಗುವುದಿಲ್ಲ."

ಆದುದರಿಂದ, ಬಂಧಿತನ ಹೆಚ್ಚುವರಿ ಬಂಧನವನ್ನು ಸಮರ್ಥಿಸಲಾಗುವುದಿಲ್ಲ ಮತ್ತು ಆತನು ಕೂಡಲೇ ಬಿಡುಗಡೆ ಮಾಡಲು ಅರ್ಹನಾಗಿದ್ದಾನೆಂಬುದು ನಮ್ಮ ಪರಿಗಣಿತ ಅಭಿಪ್ರಾಯವಾಗಿದೆ.

12. ಈ ಸಂಗತಿಗಳು ಮತ್ತು ಸಂದರ್ಭಗಳ ಹಿನ್ನೆಲೆಯಲ್ಲಿ, ವಾದಿಸಲಾದ ವಿವಿಧ ಇತರ ವಾದಗಳನ್ನು ನ್ಯಾಯಾಲಯವು ಪರಿಶೀಲಿಸುವ ಅಗತ್ಯವಿಲ್ಲವೆಂದು ಅರ್ಜಿದಾರರ ಪರ ಮಾನ್ಯ ನ್ಯಾಯವಾದಿ ಶ್ರೀ ಕಿರಣ್ ಎಸ್. ಜವಳಿಯವರು ನಿವೇದಿಸಿಕೊಂಡಿದ್ದಾರೆ.ಪ್ರತಿವಾದಿಗಳ ನ್ಯಾಯವಾದಿಗಳೂ ಇದನ್ನು ವಿರೋಧಿಸಿಲ್ಲ.ಆದ್ದರಿಂದ, ಮೇಲಿನ ಇತರ ಯಾವುದೇ ವಾದಗಳನ್ನು ನಾವು ಪರಿಗಣಿಸಿರುವುದಿಲ್ಲ.

13. ಮೇಲೆ ಹೇಳಿದ ಕಾರಣಗಳಿಂದಾಗಿ ಅರ್ಜಿಯನ್ನು ಪುರಸ್ಕರಿಸಲಾಗಿದೆ.ಬಂಧಿತನ, ಎಂದರೆ, ಶ್ರೀ ಅಕ್ಬರ್ ಸಿದ್ದಿಕ್, ತಂದೆ ಶ್ರೀ ಮೋಯಿದ್ದೀನ್ ಬ್ಯಾರಿ ಇವರ ಹೆಚ್ಚಿನ ಬಂಧನವನ್ನು ಕಾನೂನುಬಾಹಿರವೆಂದು ಅಭಿಪ್ರಾಯಪಡಲಾಗಿದೆ.ಯಾವುದೇ ಇತರ ಮೊಕದ್ದಮೆಯಲ್ಲಿ/ಗಳಲ್ಲಿ ಅವರ ಅಗತ್ಯವಿರದಿದ್ದರೆ, ಅವರನ್ನು ಈ ಕೂಡಲೇ ಅಭಿರಕ್ಷೆಯಿಂದ ಬಿಡುಗಡೆ ಮಾಡಬೇಕೆಂದು ನಿರ್ದೇಶಿಸಲಾಗಿದೆ.

ಈ ಆದೇಶದ ಮುಖ್ಯ ಭಾಗವನ್ನು ಸೆರೆಮನೆ ಪ್ರಾಧಿಕಾರಿಗಳು, ಕೇಂದ್ರ ಬಂದೀಖಾನೆ, ಪರಪ್ಪನ ಅಗ್ರಹಾರ, ಬೆಂಗಳೂರು ಇವರಿಗೆ ಅಗತ್ಯ ಕ್ರಮಕ್ಕಾಗಿ ಕೂಡಲೇ ಕಳುಹಿಸಲು ರಿಜಿಸ್ಟ್ರಿಯವರಿಗೆ ನಿರ್ದೇಶಿಸಲಾಗಿದೆ.

2019 ರ ಮಧ್ಯಂತರ ಅರ್ಜಿ ಸಂಖ್ಯೆ 1 ರಲ್ಲಿನ ಕ್ರಮ ಜರುಗಿಸುವ ಅರ್ಜಿಯನ್ನು ತಳ್ಳಿಹಾಕಲಾಗಿದೆ.